## ನಕ್ಕುಬಿಡಿ

ಟೀಚರ್: ಗುಂಡಾ, ನಮಗೆ ಮಳೆ ಏಕೆ ಬೇಕು?

ಗುಂಡ: ಭಾರತ ಕ್ರಿಕೆಟ್ ಟೀಂ ಮ್ಯಾಚ್ ಸೋಲೋದನ್ನು 'ಡ್ರಾ' ಮಾಡಲು ಟೀಚರ್!

★★★

ಪುಟ್ಟ: ಅಪ್ಪ, ವಿಧಾನಸೌಧ ಎಲ್ಲಿದೆ?

ಅಪ್ಪ: ಇದೆಂಥಾ ಪ್ರಶ್ನೆ? ಯಾವ ಶತದಡ್ಡ ಬೇಕಾದರೂ ಉತ್ತರ ಹೇಳ್ತಾನೆ.

ಪುಟ್ಟ: ಅದಕ್ಕೇ ಅಪ್ಪ ನಿಮ್ಮನ್ನು ಕೇಳಿದ್ದು!

★★★



ಬಾಸ್: ಪುನರ್ಜನ್ಮದ ಬಗ್ಗೆ ನಂಬಿಕೆ ಇದೆಯಾ?

ಗುಂಡ: ಇದೆ ಸರ್.

ಬಾಸ್: ಗುಡ್, ಮೊನ್ನೆ ನೀನು ಅಜ್ಜಿಯ ಅಂತ್ಯಸಂಸ್ಕಾರಕ್ಕೆಂದು ರಜೆ ಹಾಕಿದ್ದಲ್ಲ, ನೆನ್ನೆ ನಿನ್ನ ಅಜ್ಜಿ ನಿನ್ನ ನೋಡಲು ಕಛೇರಿಗೆ ಬಂದಿದ್ದರು!

★★★

ಇನ್ನೇನು ಸಾಯಲಿದ್ದ ಗಂಡ ಹೆಂಡತಿಗೆ ಹೇಳಿದ, 'ಪ್ರಿಯೆ, ನಾನು ನಿನಗೆ ನೋವು ಕೊಡುವ ವಿಷಯ ಹೇಳಬೇಕಾಗಿದೆ. ನಾನು ನಿನ್ನ ತಂಗಿಯನ್ನು ಲವ್ ಮಾಡಿದ್ದೆ.'

ಹೆಂಡತಿ: ಶ್! ನನಗೆ ಗೊತ್ತು, ಅದಕ್ಕೇ ತಾನೆ ವಿಷ ಉಣಿಸಿದ್ದು...

★★★

ಗುಂಡ: ತುಂಬಾ ವರ್ಷದಿಂದ ಪತ್ರಿಕೆಯಲ್ಲಿ ನನ್ನ ಹೆಸರು ಬರ್‍ಬೇಕು ಅಂತ ಎಷ್ಟೋ ಆಸೆ ಇತ್ತು. ಈಗ ನನ್ನಾಸೆ ನೆರವೇರಿತು.

ಪುಂಡ: ಯಾವ ಪತ್ರಿಕೇಲಿ ಬಂದಿದೆ?

ಗುಂಡ: ನನ್ನ 'ಲಗ್ನಪತ್ರಿಕೆ'ಯಲ್ಲಿ.

**ಸಂಗ್ರಹ: ಶ್ರುತಿ ಕೆ.ಎಸ್. ತುರುವೇಕೆರೆ**

ಮೂರ್ತಿ: ಪಕ್ಕದ ಮನೆಯವರ ಕಾಟ ತಾಳಲಾರದೆ ದಿನ ಪತ್ರಿಕೆಯನ್ನು ಮನೆಗೆ ತರಿಸುವುದನ್ನು ನಿಲ್ಲಿಸಿಬಿಟ್ಟೆ.

ಕೀರ್ತಿ: ಹೌದಾ? ಮತ್ತೆ ದಿನಪತ್ರಿಕೆ ಓದುತ್ತಿದ್ದಿಯಾ?

ಮೂರ್ತಿ: ಇದಾ? ಎದುರು ಮನೆಯವರದು.

★★★

ಗಂಡ: ಏನೇ? ಆಂಬೊಡೆ ಬಹಳ ಚೆನ್ನಾಗಿದೆ. ಹಿಟ್ಟನ್ನು ಒರಳಲ್ಲಿ ಹಾಕಿ ಚೆನ್ನಾಗಿ ರುಬ್ಬಿ ಆಮೇಲೆ ಆಂಬೊಡೆ ಮಾಡಿದಿಯಾ?

ಹೆಂಡತಿ: ಥ್ಯಾಂಕ್ಸ್, ಒಟ್ಟಿನಲ್ಲಿ ನನ್ನ ಬೆವರಿನ ಬೆಲೆ ನಿಮಗೆ ಗೊತ್ತಾಯಿತಲ್ಲ ಬಿಡಿ.

**ಸಂಗ್ರಹ: ಕೋ.ಲ. ರಂಗನಾಥರಾವ್**



ಸಂತಾ ಬಸ್‌ಸ್ಟ್ಯಾಂಡ್‌ನಲ್ಲಿ ಪರ್ಸ್ ಕದಿಯುತ್ತಿದ್ದ ವ್ಯಕ್ತಿಯನ್ನು ನೋಡಿದ.

ಕಳ್ಳ: 'ಪರ್ಸ್‌ನಲ್ಲಿ ಸಾವಿರದ ನೂರು ರೂಪಾಯಿ ಇದೆ. ನಾನೂ, ನೀನೂ ಫಿಫ್ಟಿ-ಫಿಫ್ಟಿ ತಗೊಳ್ಳೋಣ, ಓಕೆನಾ' ಎಂದ ಸಂತಾಗೆ

ಸಂತಾ ಹೇಳಿದ, 'ಓಕೆ, ಓಕೆ, ಆದರೆ ಉಳಿದಿರೋ ಸಾವಿರ ರೂಪಾಯಿ?'

★★★

ಸಂತಾ: ಕಂಪೆನಿಯೊಂದರಲ್ಲಿ ಸಂದರ್ಶನಕ್ಕೆ ಹಾಜರಾದ.

ಸಂದರ್ಶಕ: ಮೊದಲ ತಿಂಗಳು ರೂ. 5000 ಸಂಬಳ, ನಂತರ ಎರಡನೇ ತಿಂಗಳು ಕಳೆದ ಮೇಲೆ ಹತ್ತು ಸಾವಿರ ತಿಂಗಳಿಗೆ, ಕೆಲಸಕ್ಕೆ ಯಾವತ್ತಿನಿಂದ ಬರುತ್ತೀರಾ?

ಸಂತಾ: ಎರಡು ತಿಂಗಳು ಕಳೆದ ಮೇಲೆ.

**ಸಂಗ್ರಹ: ಇಂದು, ತಿಪಟೂರು**

ದೊಡ್ಡ ಬಟ್ಟೆ ಅಂಗಡಿಗೆ ಕಳ್ಳನೊಬ್ಬ ಕನ್ನ ಹಾಕಿದ. ಪೊಲೀಸರಿಗೆ ಗೊತ್ತಾಗಿ ಅವನನ್ನು 'ಮಾಲು ಸಮೇತ' ಹಿಡಿದು ಸ್ಟೇಷನ್‌ಗೆ ಎಳೆದುಕೊಂಡು ಬಂದರು. ಇನ್ಸ್‌ಪೆಕ್ಟರ್ ಸಾಹೇಬ್ರು ಕಳ್ಳನನ್ನು ಕೇಳಿದರು: 'ಅಲ್ಲಯ್ಯಾ... ನಿನಗೆ ಬುದ್ಧಿ ಬೇಡವೆ? ಕಳ್ಳತನ ಮಾಡುವಾಗ ನಿನಗೆ ಹೆಂಡತಿ ಮಕ್ಕಳ ನೆನಪು ಬರಲಿಲ್ವೇ??'

ಕಳ್ಳ ಉತ್ತರಿಸಿದ: 'ಇಲ್ಲಾ ಸ್ವಾಮಿ... ಅದು ಜೆಂಟ್ಸ್ ರೆಡಿಮೇಡ್ ಅಂಗಡಿ...!'

★★★



ದಿನವಿಡೀ 'ಚಾಯ್ ಪೆ ಚರ್ಚಾ' ಮಾಡುತ್ತಿದ್ದರೆ ಏನು ಆಗುತ್ತದೆ?

'ಆಸಿಡಿಟಿ' ಆಗುತ್ತದೆ!!

**ಸಂಗ್ರಹ: ವಿಜಯಕುಮಾರ. ಜೈನ್., ಹರಪನಹಳ್ಳಿ**